## ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 116 ಎಲ್‌ಇಟಿ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 02.06.2017

"ಮಾನ್ಯ ಸರ್ವೋಚ್ಛ ನ್ಯಾಯಾಲಯದ ಪ್ರಕರಣ"
"ಅತೀ ಜರೂರು"

## ಸುತ್ತೋಲೆ

ವಿಷಯ: Building and other Constructions welfare cess & Compliance of the directions of the Hon'ble Supreme Court contained in the order dated 16.10.2015 in WP (C) No.:318/2006 National Compaign Community for Central Legislation on Construction Labour V/s. UOI & Ors-reg.

ಉಲ್ಲೇಖ: 1. ಸರ್ಕಾರದ ಆದೇಶದ ಸಂ: ಎಲ್‌ಡಿ 300 ಎಲ್‌ಇಟಿ 2006, ದಿನಾಂಕ: 18-01-2007.

2. ಮಾನ್ಯ ಸರ್ವೋಚ್ಛ ನ್ಯಾಯಲಯ, CONTEMPT.(C)No.52/ 2013 in W.P.(C) No.318/2006ರ ಆದೇಶ ದಿನಾಂಕ: 08-05-2017.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಉಲ್ಲೇಖ(1)ರ ಸರ್ಕಾರಿ ಆದೇಶದನ್ವಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳ ಯೋಜನಾ ನಕ್ಷೆ ಮಂಜೂರಾತಿ ಪ್ರಾಧಿಕಾರಿಗಳು/ಸ್ಥಳೀಯ ಸಂಸ್ಥೆಗಳು ಕಟ್ಟಡ ಪರವಾನಿಗೆಯನ್ನು ನೀಡುವಾಗಲೇ ಮಾಲೀಕರು/ಗುತ್ತಿಗೆದಾರರು ಸಲ್ಲಿಸಿರುವ ನಿರ್ಮಾಣದ ಅಂದಾಜು ವೆಚ್ಚದಲ್ಲಿ ಶೇ.1ರಷ್ಟು ಸುಂಕವನ್ನು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ, 1996 ಕಲಂ(3) ಮತ್ತು ಕೇಂದ್ರ ನಿಯಮಗಳು 1998ರಂತೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳ ಪೂರ್ಣವೆಚ್ಚದ ಶೇ.1 ರಷ್ಟು ಹಣವನ್ನು ಸುಂಕದ ರೂಪದಲ್ಲಿ ಸಂಗ್ರಹಿಸಿ ಕಟ್ಟಡ ಮಾಲೀಕರು/ಗುತ್ತಿಗೆದಾರರು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಪಾವತಿಸುವಂತೆ ಎಲ್ಲಾ ಸಂಸ್ಥೆಗಳಿಗೆ ನಿರ್ದೇಶಿಸಲಾಗಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ನ್ಯಾಯ ನಿಂದನಾ ಅರ್ಜಿ ಸಂಖ್ಯೆ: (C)No.52/ 2013ರ ರಿಟ್ ಅರ್ಜಿ (C) No.318/2006ರ ಪ್ರಕರಣದಲ್ಲಿ **1996 ರಿಂದ 31ನೇ ಮಾರ್ಚ್ 2017ರವರೆಗೆ** ಸ್ಥಳೀಯ ಸಂಸ್ಥೆಗಳಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಪರವಾಗಿ ಸುಂಕ ಸಂಗ್ರಹಿಸಿ ಮಂಡಳಿಗೆ ವರ್ಗಾಯಿಸದೇ ಬಾಕಿ ಇರುವ ಎಲ್ಲಾ ಮೊತ್ತವನ್ನು ಮಂಡಳಿಯ ಖಾತೆಗೆ ಆದೇಶ ಹೊರಡಿಸಿದ ಆರು ವಾರದ ಒಳಗಾಗಿ ವರ್ಗಾಯಿಸಿ ಮತ್ತು ವರ್ಗಾಯಿಸಲಾದ ಸದರಿ ಮಾಹಿತಿಯನ್ನು **Comptroller and Auditor General of India** ಇವರಿಗೆ ತಿಳಿಸುವಂತೆ ದಿನಾಂಕ: **08-05-2017**ರಂದು ಆದೇಶಿಸಿರುತ್ತದೆ.

ಈ ಹಿನ್ನಲೆಯಲ್ಲಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸುವ ಹಾಗೂ ಸ್ಥಳೀಯ ಸಂಸ್ಥೆಗಳಿಂದ ಸ್ವೀಕರಿಸಿರುವ ಸುಂಕವನ್ನು ನಿಧಿಯ ರೂಪದಲ್ಲಿ ನಿರ್ವಹಣೆ ಮಾಡುವ ಕಾರ್ಯವ್ಯಾಪ್ತಿಗೆ ಮಾತ್ರ ಮಂಡಳಿಯು ಒಳಪಡುವುದರಿಂದ, **2006-07 ರಿಂದ 31-03-2017**ರವರೆಗೆ ತಮ್ಮ ಇಲಾಖೆಯ ವ್ಯಾಪ್ತಿಯಡಿ ಬರುವ ಸ್ಥಳೀಯ ಸಂಸ್ಥೆಗಳು ಇಲ್ಲಿಯವರೆಗೆ **ಒಟ್ಟು ಸಂಗ್ರಹಿಸಲಾದ ಸುಂಕದ ಮೊತ್ತವನ್ನು ಕೂಡಲೇ ಮಂಡಳಿಯ ಖಾತೆಗೆ ವರ್ಗಾಯಿಸುವಂತೆ ಮತ್ತು ಇದುವರೆಗೆ ಸಂಗ್ರಹಿಸದೇ ಬಾಕಿ ಉಳಿಸಿಕೊಂಡಿರುವ ಸುಂಕದ ಮೊತ್ತವನ್ನು ಕೂಡಲೇ ಸಂಗ್ರಹಿಸಿ ಮಂಡಳಿಗೆ ಪಾವತಿಸುವ ಬಗ್ಗೆ ಕಾನೂನಿನ ಚೌಕಟ್ಟಿನಲ್ಲಿ ಕಠಿಣ ಕ್ರಮಗಳನ್ನು ಅನುಸರಿಸುವುದು.**

ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿ: **08.05.2017**ರಂದು ನೀಡಿರುವ ಆದೇಶದನ್ವಯ ತಮ್ಮ ಇಲಾಖೆಯ ಅಧೀನದಡಿ ಕಾರ್ಯನಿರ್ವಹಿಸುವ ಎಲ್ಲಾ ಇಲಾಖೆ/ಸ್ಥಳೀಯ ಸಂಸ್ಥೆಗಳಿಗೆ ಒಂದು **ಸುತ್ತೋಲೆಯನ್ನು ಹೊರಡಿಸಿ ಸಂಗ್ರಹಿಸಿದ ಮತ್ತು ಸಂಗ್ರಹಿಸ ಬೇಕಾದ ಸುಂಕದ ವಿವರವನ್ನು 2006-07** ರಿಂದ **31-03-2017**ರವರೆಗೆ ನೇರವಾಗಿ Comptroller and Auditor General of India ಇವರಿಗೆ ಕಳುಹಿಸಿ ಅದರ ಒಂದು ಪ್ರತಿಯನ್ನು ಸಚಿವಾಲಯದ ಕಾರ್ಮಿಕ ಇಲಾಖೆಗೆ ಕಳುಹಿಸಿಕೊಡುವುದು.

ಕರ್ನಾಟಕ ರಾಜ್ಯದ ಪರವಾಗಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ **2006-07 ರಿಂದ 31-03-2017**ರವರೆಗೆ ಸಂಗ್ರಹಣೆಯಾದ ಒಟ್ಟು ಸುಂಕದ ಮೊತ್ತವನ್ನು ಪಾವತಿಸಿರುವ ಬಗ್ಗೆ ಪೂರಕ ದಾಖಲೆಗಳ ಸಹಿತವಾಗಿ ಪರಿಪೂರ್ಣವಾದ ವರದಿಯನ್ನು ಪ್ರಮಾಣ ಪತ್ರದ ಮುಖಾಂತರ **ದಿ: 02.08.2017ರಂದು ಸದರಿ ಪ್ರಕರಣವು ವಿಚಾರಣೆಗೆ ಬರುವ ಪೂರ್ವದಲ್ಲಿಯೇ** ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ವಿವರಣೆ ಸಲ್ಲಿಸಬೇಕಾಗಿರುವುದರಿಂದ ಆಯಾ ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರು, ಮಂಡಳಿ ಮತ್ತು ನಿಗಮಗಳು, ಸ್ಥಳೀಯ ಸಂಸ್ಥೆಗಳು, ಸ್ವಾಯತ್ತ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು, ವಿಶ್ವವಿದ್ಯಾನಿಲಯಗಳ ಮುಖ್ಯಸ್ಥರು, ಜಿಲ್ಲಾಧಿಕಾರಿಗಳು, ತಹಶೀಲ್ದಾರರು ಹಾಗೂ ಇತರ ಜವಾಬ್ದಾರಿಯುತ ಅಧಿಕಾರಿಗಳು ವೈಯಕ್ತಿಕ ಗಮನವನ್ನು ಹರಿಸಿ ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.

02.06.2017

(ಎಲ್.ಎಸ್. ಶ್ರೀಕಂಠಬಾಬು)
ಸರ್ಕಾರದ ಉಪ ಕಾರ್ಯದರ್ಶಿ-1
ಕಾರ್ಮಿಕ ಇಲಾಖೆ.

02.06.17

ಇವರಿಗೆ:

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಈ ಅಧಿಸೂಚನೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಸದರಿ ಪ್ರಕಟಣೆಯ 200 ಪ್ರತಿಗಳನ್ನು ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು-1 ಇವರಿಗೆ, ಕಳುಹಿಸುವಂತೆ ಕೋರಲಾಗಿದೆ.

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು
2. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು
3. ಎಲ್ಲಾ ಇಲಾಖೆಗಳ ಇಲಾಖಾ ಮುಖ್ಯಸ್ಥರುಗಳು
4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಅಧೀನ ಕಛೇರಿಗಳು
5. ಎಲ್ಲಾ ಜಿಲ್ಲಾಧಿಕಾರಿಗಳು
6. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
7. ಆಯುಕ್ತರು, ಮಹಾನಗರ ಪಾಲಿಕೆ ಮಂಗಳೂರು/ ಹುಬ್ಬಳ್ಳಿ-ಧಾರವಾಡ/ ಬೆಳಗಾವಿ/ ಗುಲಬರ್ಗಾ/ ಮೈಸೂರು
8. ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಹಣಾಧಿಕಾರಿಗಳು
9. ಎಲ್ಲಾ ನಗರಸಭೆ/ಪುರಸಭೆಗಳ ಮುಖ್ಯಾಧಿಕಾರಿಗಳು
10. ಎಲ್ಲಾ ಪಟ್ಟಣ ಪಂಚಾಯತಿಗಳ ಮುಖ್ಯಾಧಿಕಾರಿಗಳು
11. ಎಲ್ಲಾ ಇಲಾಖೆಗಳ ಕಾರ್ಯನಿರ್ವಾಹಕ ಅಭಿಯಂತರು/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
12. ಕರ್ನಾಟಕ ವಿದ್ಯುತ್‌ಚ್ಛಕ್ತಿ ನಿಗಮದ ಎಲ್ಲಾ ಶಾಖೆಗಳಿಗೆ ಹಾಗೂ ಅನುಷ್ಠಾನ ಅಧಿಕಾರಿಗಳಿಗೆ
13. ಎಲ್ಲಾ ರಾಜ್ಯ/ಕೇಂದ್ರ ಸ್ಥಳೀಯ ಸಂಸ್ಥೆಗಳು/ಮಂಡಳಿಗಳು
14. ಎಲ್ಲಾ ಜಿಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಿಗಳು
15. ಎಲ್ಲಾ ಗ್ರಾಮ ಪಂಚಾಯಿತಿ ವಿಸ್ತರಣಾಧಿಕಾರಿಗಳು
16. ಕೇಂದ್ರ ಸರ್ಕಾರದ ಲೋಕೋಪಯೋಗಿ ಇಲಾಖೆ/ಕಛೇರಿಗಳು/ಭಾರತ ಸಂಚಾರ ನಿಗಮ ನಿಯಮಿತ (ಬಿ.ಎಸ್.ಎನ್.ಎಲ್) ಹಾಗೂ ಇತರೆ ಸಂಬಂಧಪಟ್ಟ ಇಲಾಖೆಗಳು (ಕಾರ್ಮಿಕ ಆಯುಕ್ತರ ಮುಖಾಂತರ)

<u>ಪ್ರತಿ:</u>

1) ಸನ್ಮಾನ್ಯ ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿಯವರು
2) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
3) ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ, ಕಾರ್ಮಿಕ ಭವನ, ಬೆಂಗಳೂರು.
4) ಕಾರ್ಮಿಕ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ (ಕಾರ್ಮಿಕ ಆಯುಕ್ತರ ಮುಖಾಂತರ)
5) ಕಾರ್ಯದರ್ಶಿಗಳು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
6) ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಗಳು, ಕೊಠಡಿ ಸಂಖ್ಯೆ: 237/238, 2ನೇ ಮಹಡಿ, ವಿಧಾನಸೌಧ, ಬೆಂಗಳೂರು.
7) ಸರ್ಕಾರದ ಕಾರ್ಯದರ್ಶಿಗಳವರ ಹಿರಿಯ ಆಪ್ತ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ,
8) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

72(c)